**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ,ರವರ ನ್ಯಾಯಾಲಯ, ಕಡೂರು.**

**ಸಿ.ಸಿ. ಸಂಖ್ಯೆ 973/2024**

ಪಿರ್ಯಾದುದಾರರು ಃ ಸರ್ಕಾರದ ಪರವಾಗಿ ಕಡೂರು ಪೊಲೀಸರಿಂದ

-ವಿರುದ್ಧ-

ಆರೋಪಿ ಃ ಧರಣಿ ಕುಮಾರ್ ಹೆಚ್.ಆರ್. ಬಿನ್ ರಾಜಪ್ಪ, ಸುಮಾರು 47 ವರ್ಷ, ವ್ಯವಸಾಯ, ವಾಸ ಃ ಹೋರಿತಿಮ್ಮನಹಳ್ಳಿ, ಬೀರೂರು ಹೋಬಳಿ ಕಡೂರು ತಾಲ್ಲೂಕು.

**-ಃ ಆ ಪಾ ದ ನೆಃ-**

ದಿನಾಂಕ 15.01.2024 ರಂದು ಬೆಳಿಗ್ಗೆ 9.00 ಗಂಟೆ ಸಮಯದಲ್ಲಿ ಕಡೂರು ಪೊಲೀಸ್ ಠಾಣಾ ವ್ಯಾಪ್ತಿಗೆ ಸೇರಿದ ಕಡೂರು ಟೌನ್ ಉಳುಕಿನಕಲ್ಲು ಕ್ರಾಸ್ ನ ಸಮೀಪ ಕಾರ್ತೀಕ್ ಆಟೋ ಮೊಬೈಲ್ ಶಾಪ್ ನ ಮುಂಭಾಗದ ಕಡೂರು - ಬೀರೂರು ರಾಷ್ಟ್ರೀಯ ಹೆದ್ದಾರಿ ಎನ್.ಹೆಚ್.206 ರಸ್ತೆಯ ನೈರುತ್ಯ ದಿಕ್ಕಿನ ಬದಿಯ ಮಣ್ಣು ರಸ್ತೆಯಲ್ಲಿ ಆರೋಪಿಯಾದ ನೀವು ನಿಮ್ಮ ಬಾಬ್ತು ಕೆಎ 18/ಇಎ 5095 ರ ಹಿರೋ ಫ್ಯಾಷನ್ ಪ್ರೋ ಬೈಕ್ ನ್ನು ಕಡೂರು ಕಡೆಯಿಂದ ಅತಿವೇಗ ಮತ್ತು ನಿರ್ಲಕ್ಷ್ಯತನದಿಂದ ಚಾಲನೆ ಮಾಡಿಕೊಂಡು ಬಂದು, ರಸ್ತೆಯ ಬದಿಯ ಮಣ್ಣು ರಸ್ತೆಯಲ್ಲಿ ನಿಂತಿದ್ದ ಚಾಸಾ-2 ಪವನ್ ಕುಮಾರ್ ವಿ. ರವರಿಗೆ ಡಿಕ್ಕಿಪಡಿಸಿ ಅಪಘಾತಪಡಿಸಿರುತ್ತೀರಿ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 279 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ನನ್ನ ಸಂಜ್ಞಾನದಲ್ಲಿಮಾಡಿರುತ್ತೀರಿ.

ಕೊನೆಯದಾಗಿ ಮೇಲೆ ಹೇಳಿದ ದಿನಾಂಕ, ಸಮಯ, ಸ್ಥಳ ಹಾಗೂ ಸಂದರ್ಭಗಳಂದು ಮೇಲ್ಕಂಡ ವಾಹನವನ್ನು ಮೇಲೆ ಹೇಳಿದ ರೀತಿಯಲ್ಲಿ ಚಲಾಯಿಸಿಕೊಂಡು ಬಂದು ಚಾಸಾ-2 ರವರಿಗೆ ಡಿಕ್ಕಿಪಡಿಸಿದ ಪರಿಣಾಮ, ಚಾಸಾ-2 ರವರು ರಭಸವಾಗಿ ನೆಲದ ಮೇಲೆ ಬಿದ್ದು, ಚಾಸಾ-2 ರವರ ತಲೆಗೆ, ಮುಖಕ್ಕೆ, ದವಡೆ ಹಲ್ಲುಗಳಿಗೆ, ಕೈಕಾಲುಗಳಿಗೆ ತೀವ್ರ ಸ್ವರೂಪದ ಗಾಯಗಳುಂಟಾಗಿರುತ್ತದೆ. ಆದ್ದರಿಂದ ನೀವು ಭಾರತೀಯ ದಂಡ ಸಂಹಿತೆಯ ಕಲಂ 338 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಸಂಜ್ಞಾನದಲ್ಲಿ ಮಾಡಿರುತ್ತೀರಿ.

ನೀವು ಈ ನ್ಯಾಯಾಲಯದ ವ್ಯಾಪ್ತಿಯಲ್ಲಿ ಸದರಿ ಅಪರಾಧವನ್ನು ಮಾಡಿರುವುದರಿಂದ ಈ ಮೇಲಿನ ಆಪಾದನೆಯನ್ನು ಈ ನ್ಯಾಯಾಲಯದಲ್ಲಿ ಎದುರಿಸಬೇಕೆಂದು ನಾನು ನಿರ್ದೇಶಿಸುತ್ತಿದ್ದೇನೆ.

1. ನಿಮಗೆ ಈಗ ಓದಿ ಹೇಳಿದ ಆರೋಪವು ತಿಳಿಯಿತೆ?

ಉಃ ತಿಳಿಯಿತು

2. ನಿಮ್ಮ ಮೇಲೆ ಇರುವ ಆರೋಪವನ್ನು ಒಪ್ಪಿಕೊಳ್ಳುವಿರೋ ಅಥವಾ ವಿಚಾರಣೆ ಆಗಬೇಕೆ?

ಉಃ ಯಾವುದೇ ತಪ್ಪು ಮಾಡಿರುವುದಿಲ್ಲ. ವಿಚಾರಣೆ ಆಗಬೇಕು

ಆಪಾದನೆಯನ್ನು ಆರೋಪಿಗೆ ಓದಿ ಹೇಳಿ ಅವರು ಕೊಟ್ಟ ಉತ್ತರವನ್ನು ಯಥವತ್ತಾಗಿ ದಾಖಲಿಸಲಾಗಿದೆ ಎಂದು ಈ ಮೂಲಕ ದೃಢೀಕರಿಸಲಾಗಿದೆ.

ದಿನಾಂಕಃ 26 ನೇ ಡಿಸಂಬರ್ 2024.

-ಸಹಿ-

**(ಅಮ್ರಿನ್ ಸುಲ್ತಾನ),**
ಪ್ರಭಾರ ಪ್ರಪ್ರದನ್ಯಾದಂ., ಕಡೂರು.